ಪಾರಿವಾಳ... ಛೇ ಕಳೆದುಕೊಳ್ಳುವ ಆ ಸುಖ ಇಂದಿಗೆ ಕಟ್ಟಕಡೆಯ ನೋವಾಗಿ ಮಿಡಿಯಿತು.

ಭಾರವಾದ ಮನಸ್ಸನ್ನು ಹಗುರ ಮಾಡಿಕೊಳ್ಳಲು ತಾನೇ ನೆಟ್ಟಿದ್ದ ಬಿಳಿ ದಾಸಾಳದ ತುದಿಯಲ್ಲಿ ನುಲಿದಾಡುತ್ತಿದ್ದ ಹೂವಿನ ಚೆಲುವಿನಲ್ಲಿ ಮೊರೆಹೋದಳು. ಅಲ್ಲಿ ಮೈದುಂಬಿ ಮೇಯುತ್ತಿದ್ದ ಕೀಟವೊಂದು ಗಾತ್ರ ಹೆಚ್ಚಿಸಿಕೊಳ್ಳುತ್ತ ಆಕೆಯ ಮುಂದೆ ದೈತ್ಯಾಕಾರದಲ್ಲಿ ಬೆಳೆದು ನಿಂತಿತು. ಅದಕ್ಕೆ ಕೈಕಾಲು ಮುಖ, ಕಣ್ಣು, ಬಾಯಿ, ಮೂಗು, ಕಿವಿ ಮೂಡುತ್ತಿದ್ದಂತೆ ಮೃದು ಮಾತಿನ ಲಯವನ್ನಾಧರಿಸಿ 'ಮಗಳೇ' ಎಂದಿತು. ಕೀಟಕ್ಕೀಗ ಆಕಾರ ಬಂತು; ಮಾತು ಒಡೆಯಿತು.

'ನಿನಗ ಪಸಂದ ಬಂದಿಲ್ಲಂದ್ರ ಈ ಬೀಗಸ್ತನದ ಮಾತುಕತಿ ಮಾಡೂದ ಬ್ಯಾಡ. ತಮ್ಮನ ಲಗ್ನ ಬೇಕಾರ ಈ ಬ್ಯಾಸಿಗ್ಗೆ ಮಾಡಿ ಮುಗಸೂಣು... ನಿನ್ನ ದೈವದಾಗ ಬರದಂಗ ಅಕ್ಕೇತಿ.'

ಅದು ಆಕಾರಗೊಂಡಾಗಲೇ ಅನಿಸಿದ್ದನ್ನು ನವೂರಾಗಿ ಹೇಳಿ ಪೂರೈಸಿತ್ತು. ಧಾರವಾಡಕ್ಕೆ ಪಿ.ಜಿ ಮಾಡಲಿಕ್ಕೆ ಹೋಗತೇನೆ ಅಂದಾಗಲೂ ಇಂಥದ್ದೆ ಪ್ರೀತಿಯನ್ನ ಉಕ್ಕಿಸುವ ಕರುಣಾರ್ದ್ರ ಕಣ್ಣುಗಳನ್ನು, ಚಲನವಲನಗಳನ್ನು, ಅಪ್ಪನೆಂಬ ಅಸಹಾಯಕತೆಯ ಗಾಂಭೀರ್ಯವನ್ನು, ಮಾತೆಂಬ ಹೂಮುತ್ತುಗಳನ್ನು ಟವೆಲ್ಲಿನಲ್ಲಿ ಕಟ್ಟಿ ಹೊಡೆದಿದ್ದು ತಟ್ಟನೆ ನೆನಪಾಯ್ತು. ಅವಳ ಮುಂದಿನ ಮೌನಕ್ಕೆ ಮತ್ತೊಂದು ಮಗದೊಂದು ಹೀಗೆ ತನ್ನೆಲ್ಲ ಬರುವ ಪಗಾರದಿಂದ ಹಿಡಿದು, ತಾನು ಪಟ್ಟಪಾಡೆಲ್ಲವನ್ನು ಹೇಳುತ್ತಲೇ ಇದ್ದ. 'ಅಪ್ಪಾ, ನಾ ಒಲ್ಲೆ ಅಂದಿಲ್ಲ. ನೀವ ಏನಕೇನ ಅನಕೊಂಡರ ನಾ ಏನ ಹೇಳಲಿ...' ಅವಳ ಉತ್ತರದಲ್ಲಿ ಮೌನವೇ ತುಂಬಿತ್ತಾದರೂ ತುಟಿಬಿರಿದು ಮೂಡಿದ್ದ ಮಾತು ಅವಳದ್ದೆ ಎಂಬಂತಿತ್ತು. ಇದಿರುಗೊಳ್ಳುವ ಆ ಸಂಕಟಕ್ಕೆ ತನ್ನವೇ ಆದ ಕಣ್ಣುಗಳು ಸೋತು ಶರಣಾದುವಲ್ಲ ಎಂದುಕೊಳ್ಳಲು ಆ ಹೂವಿನ ನಡುವೆ ಕೂತ ಕೀಟಕ್ಕೆ ಬಲಬಂದಂತಾಯ್ತು.

'ಬಿಡು ಸಾಕು, ನೀ ಒಪ್ಪಿ ಅಂದ್ರ ಧಾಂ ಧೂಮಂತ ಲಗ್ಗಣಾ ಹೊಡಸತೇನಿ' ಎಂದು ಒಳಗೆ ನಡೆದೆ ಬಿಟ್ಟ.

ಅವಳ ಮನಸ್ಸು ವ್ಯಗ್ರಗೊಂಡು ಕುದಿಯುತ್ತಿತ್ತು. ಅವನ ಬಗ್ಗೆ ಶೈಲಾ ಹೇಳಿದ್ದ ಒಂದೊಂದು ಮಾತು ಅಕ್ಷರಶಃ ಸತ್ಯವಿದ್ದಿರಬೇಕೆಂಬ ಅನುಮಾನ ಇಮ್ಮಡಿಗೊಳ್ಳತೊಡಗಿತು. ಅಳ್ನಾವರದ ಆ ಪುಟ್ಟ ಪಟ್ಟಣದ ತಕ್ಕಮಟ್ಟಿಗೆ ಅನುಕೂಲವಾದ ಆ ಮನೆಯ ಹೆಂಚುಗಳಲ್ಲಿ, ಹಿತ್ತಲದ ಬಾವಿಯಲ್ಲಿ, ತಾನೇ ಗೋಧಳ್ಳಿಯ ಶೈಲಾಳ ಮನೆಯಿಂದ ಒಂದು ಟೊಂಗೆಯನ್ನು ಕಿತ್ತು ತಂದು ನೆಟ್ಟು ನೀರುಣಿಸಿ ಪೋಷಿಸಿದ್ದ ಗುಲಾಬಿಯ ಗಿಡದಲ್ಲಿ, ದಾಸಾಳದ ಬೇರಿನಲ್ಲಿ, ದೂರದಲ್ಲೆಲ್ಲೋ ಕೊಂಯ್ಯೋ... ಅಂತ ಕೂಗುವ ರೈಲಿನ ಶಿಳ್ಳೆಯಲ್ಲಿ, ಈಗಷ್ಟೆ ಆರಂಭವಾಗಿದ್ದ ಬಿಸಿಲಿನ ತಾಪದ ನಡುವೆ ಎದ್ದೆದ್ದು ಹಾರುತ್ತಿದ್ದ ಬಿಸಿಲುಗುದುರೆಯಲ್ಲಿ ಹೀಗಿರುವ ಯಾವದಾದರೂ ಒಂದರಲ್ಲಿ ತಾನು ಕರಗಿ ಹೋಗಬಾರದೆ ಎನಿಸಿತ್ತವಳಿಗೆ. ಅಕ್ಕನಿಗಿಂತ ಮೊದಲು ತಮ್ಮನೋ ತಂಗಿಯದೋ ಮದುವೆಯಾದರೆ ಈಕೆ ಯಾರ ಲೆಕ್ಕಕ್ಕೂ ಸಿಕ್ಕದ ಜೀವವಾಗಿ ಸವೆಸಬೇಕಾದ ಒಂಟಿತನದ, ಏನೋ ಊನು, ಏನೋ ಅಮಂಗಳ, ಇನ್ನೂ ಏನೇನೋ ಊಹಾಪೋಹಗಳ ಹಾದಿಯನ್ನು ತುಳಿಯಬೇಕಾಗುತ್ತದೆ ಎಂಬ ಹೆದರಿಕೆಯಲ್ಲಿ ಅವಳ ಅಪ್ಪ ಅವ್ವ ಹುಡುಗನನ್ನು ಖಾತ್ರಿ ಮಾಡಿಕೊಂಡಿದ್ದರು. ಅವಳು ಮಾತ್ರ ಆ ಏನೋಗಳ ನಡುವೆ ಏನೂ ಇಲ್ಲದವಳಾಗಿ ಇನ್ನ್ಯಾರದ್ದೋ ಅಂಗೈ ಅರಮನೆಯ ಸೊಬಗಿಗೆ ಚಂದದ ಕಲಾಕೃತಿಯಾಗಿಯೋ ಇಲ್ಲಾ, ಮನೆಗೊಂಬೆಯಾಗಿಯೋ ಇಲ್ಲಾ, ಕರ್ಪೂರದ